ಕೋಲಾರ,
ತುಮಕೂರು,
ಚಿಕ್ಕಬಳ್ಳಾಪುರ,
ಬೆಂಗಳೂರು,
ರಾಮನಗರ
ಜಿಲ್ಲೆಗಳ
ಪ್ರಾದೇಶಿಕ
ಕನ್ನಡ ದಿನಪತ್ರಿಕೆ

01 ಏಪ್ರಿಲ್ 2018, ಭಾನುವಾರ

# ಬೆವರ ಹನಿ

ಸಹಾಯಕ ಸಂಪಾದಕ: ಎಂ.ಸತೀಶ
ಸಂಪಾದಕ: ಕುಚ್ಚಂಗಿ ಪ್ರಸನ್ನ
ಕನ್ನಡಿಗರ ನಿಜ ದನಿ

ಬ್ಲಾಗ್‌ನಲ್ಲೂ ಪತ್ರಿಕೆ ಓದಿ
bevara hani. blogspot.com
kuchchangiprasanna
bevarahaniklr@gmail.com,
bevarahanipaper@gmail.com.
9480612021
9481701813
9964516565

BEVARA HANI Morning Kannada Daily • RNI - KARKAN/ 2011/ 46717 • KOLAR • ಸಂಪುಟ: 07 • ಸಂಚಿಕೆ: 219 • 4 ಪುಟಗಳು • ರೂ.1.50

## "ನೀರನ್ನ ಹೆಂಗ್ ಬಳಸಬೇಕು ಅಂತ ಹೆಣ್ ಮಕ್ಕಳಿಗೇ ಚೆನ್ನಾಗಿ ಗೊತ್ತು"

**ನೂರು ವರ್ಷ ಹಳೆಯದಾದ ಭದ್ರಾವತಿ ತಾಲ್ಲೂಕಿನ ಗೊಂದಿ ಅಣೆಕಟ್ಟೆಯ ನವೀಕರಣ ನಡೆಯುತ್ತಿದೆ. ನೀರು ಹರಿಯುವ ಗ್ರಾಮಗಳ ಜನರ ಮೂಲಕವೇ ಕಾಮಗಾರಿ ನಡೆಯುತ್ತಿರುವುದು ಇದರ ವೈಶಿಷ್ಟ್ಯ. ಹೆಣ್ಣುಮಕ್ಕಳೂ ಇದರ ಜವಾಬ್ದಾರಿಯನ್ನು ಯಶಸ್ವಿಯಾಗಿ ಹೊರುತ್ತಿದ್ದಾರೆ. ಎಲ್ಲಾ ನೀರಾವರಿ ಯೋಜನೆಗಳಿಗೂ ಇದು ಅನುಕರಣೀಯ. ಈ ಕುರಿತು ಸುಜಾತಮ್ಮ, ಸೀಗೆಬಾಗಿ ನೀರು ಬಳಕೆದಾರ ಸಹಕಾರ ಸಂಘದ ಸದಸ್ಯರು, ಭದ್ರಾವತಿ ತಾಲ್ಲೂಕು ಇವರ ಮಾತುಗಳು ಇಲ್ಲಿವೆ.**

**– ಮಲ್ಲಿಕಾರ್ಜುನ ಹೊಸಪಾಳ್ಯ**

**ಪ್ರಶ್ನೆ: ಸಿವಿಲ್ ಕಾಮಗಾರಿ ಮಾಡುವವರು ಮಹಿಳೆಯರ ಮಾತನ್ನು ಕೇಳುತ್ತಾರಾ? ಅವರನ್ನು ಹೇಗೆ ಮನವೊಲಿಕೆ ಮಾಡುತ್ತೀರಿ?**

ಸುಜಾತ: ಸ್ಕೆಕ್ ಸಂಸ್ಥೆ ಮತ್ತು ಕಾಡಾ ಕಛೇರಿಯಿಂದ ಕಾಮಗಾರಿಯ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಆ ಪ್ರಕಾರ ಕಾಮಗಾರಿ ಮಾಡುವಾಗ ಮುಂದೆ ನಿಂತಿದ್ದು ಕೆಲಸ ಮಾಡಿಸುತ್ತೇವೆ. ಇದಲ್ಲದೆ ಕಾಲುವೆಗಳನ್ನು ಮಾಡಿಸುವಾಗ ಹಲವಾರು ತೊಂದರೆಗಳು ಬಂದಿರುತ್ತವೆ. ಆಗ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ, ತಜ್ಞರ ಸಲಹೆ ತಗೆದುಕೊಂಡು ನೀರು ಸರಾಗವಾಗಿ ಹರಿದು ಹೋಗುವಂತೆ ಕಾಮಗಾರಿಯನ್ನು ಮಾಡಿಸಿರುತ್ತೇವೆ.

**ಪ್ರಶ್ನೆ: ಸಮಿತಿಗಳನ್ನು ಮಾಡಿಕೊಂಡಿದ್ದೀರಾ? ಎಷ್ಟು ಜನ ಸಮಿತಿಯಲ್ಲಿದ್ದಾರೆ?**

ಸುಜಾತ: ನಮ್ಮಲ್ಲಿ ಮಹಿಳಾ ಉಪಸಮಿತಿಯನ್ನು ಮಾಡಿಕೊಂಡಿದ್ದು ಒಟ್ಟು 10 ಜನರಿದ್ದಾರೆ. ಸಾಮಾನ್ಯವಾಗಿ ಸಮಿತಿ ಕೆಲಸ ಹಾಗೂ ಕಾರ್ಯಚಟುವಟಿಕೆಯಲ್ಲಿ ಭಾಗವಹಿಸಲು ಸುಮಾರು ಜನ ಅಡ್ಡಿ ಮಾಡುತ್ತಾರೆ, ಆದರೆ ನಮ್ಮ ಮನೆ ಹಾಗೂ ಸಂಘದಲ್ಲಿ ಒಪ್ಪಿಗೆ ಇದೆ.

**ಪ್ರಶ್ನೆ: ಈಗಾಗಲೇ ಎಷ್ಟು ಮೊತ್ತದ ಕಾಮಗಾರಿಗಳನ್ನು ಮಾಡಿಸಿರುತ್ತೀರಿ ಮತ್ತು ಹಣವನ್ನು ಯಾವುದಕ್ಕೆ ಉಪಯೋಗಿಸಿರುತ್ತೀರಿ?**

ಸುಜಾತ: ಈವರೆಗೆ ಸುಮಾರು 16,60,000 ರೂ. ಮೊತ್ತದ ಕಾಮಗಾರಿಗಳನ್ನು ಮಾಡಿಸಿರುತ್ತೇವೆ. ಹಣವನ್ನು ಮರಳು, ಸಿಮೆಂಟ್, ಜಲ್ಲಿ, ಹಾಗೂ ಮಣ್ಣು ತರಿಸುವುದಕ್ಕೆ ಮತ್ತು ಕಾಮಗಾರಿಯಲ್ಲಿ ಕೆಲಸಗಾರರ ಕೂಲಿ ಕೊಡುವುದಕ್ಕೆ ಉಪಯೋಗಿಸಲಾಗಿದೆ.

**ಪ್ರಶ್ನೆ: ಗುಣಮಟ್ಟದ ಪರೀಕ್ಷೆ ಮಾಡುತ್ತೀರಾ?**

ಸುಜಾತ: ಯಾವುದೇ ವಸ್ತುಗಳನ್ನು ಕಾಮಗಾರಿಯಲ್ಲಿ ಉಪಯೋಗಿಸುವ ಮೊದಲು ಪರೀಕ್ಷೆ ಮಾಡಿ, ಉತ್ತಮ ಗುಣಮಟ್ಟದ ಕಚ್ಚಾವಸ್ತು ಎಂದು ಖಾತ್ರಿಯಾದ ನಂತರವಷ್ಟೇ ಕಾಮಗಾರಿಯಲ್ಲಿ ಉಪಯೋಗಿಸುತ್ತೇವೆ. ಇಲ್ಲದಿದ್ದರೆ ವಾಪಸು ಕಳುಹಿಸುತ್ತೇವೆ. ಸರಿಯಾದ ಪ್ರಮಾಣದಲ್ಲಿ ಮರಳು, ಜಲ್ಲಿ, ಸಿಮೆಂಟ್ ಹಾಕುತ್ತಿದ್ದಾರೋ, ಇಲ್ಲವೋ ಎಂದು ನೋಡುತ್ತಿದ್ದೇವೆ. ಅದಷ್ಟು ನೇರವಾಗಿ ಲೈನಿಂಗ್ ಮಾಡುವಂತೆ ಹೇಳಿದ್ದೇವೆ. ಉತ್ತಮ ಗುಣಮಟ್ಟದ ಕೆಲಸ ನಡೆಯುವಂತೆ ಎಲ್ಲಾ ಸಮಯದಲ್ಲೂ ಮುಂದೆ ನಿಂತಿದ್ದು ಕಾಮಗಾರಿಗಳನ್ನು ಮಾಡಿಸುತ್ತೇವೆ.



**ಪ್ರಶ್ನೆ: ಕಾಲುವೆಗಳು ದುರಸ್ತಿ ಆದ ಮೇಲೆ ಏನು ಅನಿಸುತ್ತೆ? ಎಷ್ಟು ಅನುಕೂಲವಾಗಿದೆ? ನೀರಿನ ಶುಲ್ಕ ವಸೂಲಿಯಲ್ಲಿ ನಿಮ್ಮ ಜವಾಬ್ದಾರಿ ಏನು? ಅದನ್ನು ಹೇಗೆ ನಿಭಾಯಿಸುತ್ತೀರಿ?**

ಸುಜಾತ: ಕಾಮಗಾರಿಗೂ ಮೊದಲು ಗಿಡಮರಗಳು, ಅವುಗಳ ಬೇರುಗಳು ಹಾಗೂ ಬದುವಿನ ಮಣ್ಣು ಕಾಲುವೆಗಳಲ್ಲಿ ಬಿದ್ದು ಹೂಳು ತುಂಬಿ ನೀರು ಸರಾಗವಾಗಿ ಹರಿಯದೇ ಅಲ್ಲಲ್ಲೆ ನಿಂತು ರೈತರಿಗೆ ನೀರು ಸಮರ್ಪಕವಾಗಿ ಸಿಗದೇ ತುಂಬಾ ತೊಂದರೆಯಾಗುತ್ತಿತ್ತು. ಕಾಲುವೆಗಳ ದುರಸ್ತಿಯಾದ ಮೇಲೆ ಅಡೆತಡೆ ಇಲ್ಲದೆ ಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯುತ್ತಿದ್ದು ಕಾಲುವೆಯ ಕೊನೆಯ ಭಾಗದ ರೈತರಿಗೂ ಸಹ ನೀರು ಸಮರ್ಪಕವಾಗಿ ಲಭ್ಯವಾಗುತ್ತಿದೆ, ಇದರಿಂದ ಈ ಅಚ್ಚುಕಟ್ಟು ಭಾಗದ ಎಲ್ಲಾ ರೈತರಿಗೂ ನೀರಿನ ಅನುಕೂಲ ಆಗಿದೆ. ಇದೇ ರೀತಿ ಉಳಿಸಿಕೊಂಡು ಹೋಗುವುದು ನೀರು ಬಳಕೆದಾರ ಸಹಕಾರ ಸಂಘ ಹಾಗೂ ಈ ಭಾಗದ ರೈತರ ಜವಾಬ್ದಾರಿಯಾಗಿದೆ.

**ಪ್ರಶ್ನೆ: ನೀರನ್ನು ಮಿತವಾಗಿ ಬಳಸಲು ಏನಾದರು ಕ್ರಮಗಳನ್ನು ಕೈಗೊಂಡಿದ್ದೀರಾ?**

ಸುಜಾತ: ನೀರನ್ನ ಜೋಪಾನವಾಗಿ ಹೆಂಗ್ ಬಳಸಬೇಕು ಅಂತ ಹೆಣ್ ಮಕ್ಕಳಿಗೇ ಚೆನ್ನಾಗಿ ಗೊತ್ತು, ನೀರು ಸಿಗುತ್ತದೆ ಎಂದು ಹೆಚ್ಚು ಹೆಚ್ಚು ನೀರನ್ನು ಹೊಲಗಳಿಗೆ ಹಾಯಿಸುವುದು ರೈತರ ಸಾಮಾನ್ಯ ವಾಡಿಕೆ. ಆದರೆ ಬೆಳೆಗೆ ತಕ್ಕಂತೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಿತವಾಗಿ ಬಳಸುವಂತೆ ರೈತರಿಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ. ನೀರುಗಂಟಿಗಳನ್ನು ಇಟ್ಟು ಅವರು ಹೊಲಗಳ ಎಲ್ಲಾ ಭಾಗಗಳಿಗೂ ನೀರು ಹರಿಯುವಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗುತ್ತಿದೆ. ಅದೇ ರೀತಿ ರೈತರು ತಮಗೆ ಬೇಕಾದಷ್ಟು ನೀರನ್ನು ಕಟ್ಟಿಕೊಳ್ಳುವುದರ ಮೂಲಕ ಕಾಲುವೆಯ ಕೊನೆಯವರೆಗಿನ ರೈತರ ಹೊಲಗಳಿಗೂ ನೀರು ಸಿಗುವಂತೆ ಮಾಡಲು ಸಂಘದಿಂದ ತಿಳುವಳಿಕೆ ಕೊಟ್ಟಿರುತ್ತೇವೆ.

**ಪ್ರಶ್ನೆ: ನೀರಿನ ಶುಲ್ಕ ವಸೂಲಿಯಲ್ಲಿ ನಿಮ್ಮ ಜವಾಬ್ದಾರಿ ಏನು? ಅದನ್ನು ಹೇಗೆ ನಿಭಾಯಿಸುತ್ತೀರಿ?**

ಸುಜಾತ: ನೀರಿನ ಶುಲ್ಕ ವಸೂಲು ಮಾಡುವ ಜವಾಬ್ದಾರಿ ಮತ್ತು ಕಾಲುವೆ ನಿರ್ವಹಣೆಯ ಜವಾಬ್ದಾರಿಯನ್ನು ಸರ್ಕಾರವು ನೀರು ಬಳಕೆದಾರರ ಸಂಘಗಳಿಗೆ ವಹಿಸುತ್ತಿರುವುದರಿಂದ, ರೈತರ ಬೆಳೆಗೆ ತಕ್ಕಂತೆ ನೀರನ್ನು ಮಿತವಾಗಿ ಹಾಗೂ ಸಮರ್ಪಕವಾಗಿ ಹಂಚುವುದು ಮತ್ತು ನೀರನ್ನು ಉಪಯೋಗಿಸುವ ಎಲ್ಲಾ ರೈತರಿಂದ ನೀರು ಶುಲ್ಕ ವಸೂಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೇವೆ. ಸಂಘಕ್ಕೆ ಬರುವ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವುದು ಮತ್ತು ಖರ್ಚುವೆಚ್ಚಗಳ ಪಾರದರ್ಶಕ ನಿರ್ವಹಣೆ ಮೂಲಕ ಮಾದರಿ ಸಂಘವಾಗಬೇಕು ಎಂಬುದು ನಮ್ಮ ಎಲ್ಲಾ ಹೆಣ್ಣುಮಕ್ಕಳ ಆಶಯವಾಗಿದೆ. ●